## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಿಬಿಎಂಪಿ ವ್ಯಾಪ್ತಿಯಲ್ಲಿ Covid-19 ನಿರ್ವಹಣೆಗೆ ಮಾನವ ಸಂಪನ್ಮೂಲವನ್ನು ಒದಗಿಸಲು ರೂ.21.42 ಕೋಟಿ ಅನುದಾನ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಏಕ ಕಡತ ಸಂಖ್ಯೆ: ಆಕುಕನಿ/ಆಪ್ರ/104/2020-21

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಏಕ ಕಡತ ಸಂಖ್ಯೆ: ಆಕುಕನಿ/ಆಪ್ರ/104/2020-21 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 10,000 Covid-19 ರೋಗಿಗಳನ್ನು 6 ತಿಂಗಳುಗಳ ಅವಧಿಗೆ ನಿರ್ವಹಣೆ ಮಾಡಲು, ವೈದ್ಯರು, ನರ್ಸ್‌ಗಳು, ಸಹಾಯಕರು ಮೊದಲಾದ ಸಿಬ್ಬಂದಿಗಳನ್ನೊಳಗೊಂಡ ಈ ಕೆಳಕಂಡ ತಖ್ತೆಯಲ್ಲಿ ವಿವರಿಸಿರುವಂತೆ ಮಾನವ ಸಂಪನ್ಮೂಲ ಅವಶ್ಯಕತೆ ಇದ್ದು, ಇದಕ್ಕಾಗಿ ರೂ.21.42 ಕೋಟಿ ಅನುದಾನ ಅವಶ್ಯಕವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

| Sl. No. | HR required for hospitals (Ayush, BDS Medical officers) | Per day/ (for 3 shift) | For 1 month salary (Rs.) in Lakhs | For 6 months salary (Rs.) in Lakhs | Re-marks |
|---|---|---|---|---|---|
| 1. | For every 100 patients 1 doctors per shift | 100x3=300 | 45000x300=135.00 | 810.00 | |
| 2. | For every 50 patients 1 staff nurse per shift | 200x3=600 | 20000x600=120.00 | 720.00 | |
| 3. | For every 100 patients 2 supporting staffs per shift | 100x2=200 | 15000x200=30.00 | 180.00 | |
| 4. | For every 100 patients 3 group D per shift | 200x3=600 | 12000x600=72.00 | 432.00 | BBMP to Provide the Group 'D' |
| | **Total** | **1700** | **357.00** | **2142.00** | |

ಮುಂದುವರೆದು, ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಕೇರ್ ಸೆಂಟರ್ ಗಳನ್ನು ಬಿಬಿಎಂಪಿ ಯು ನಿರ್ವಹಿಸುತ್ತಿರುವುದರಿಂದ ಹಾಗೂ ಸದರಿ ಕೇಂದ್ರಗಳು ಬಿಬಿಎಂಪಿಯ ನಿಯಂತ್ರಣದಲ್ಲಿರುವುದರಿಂದ, ಮೇಲ್ಕಂಡ 1700 ಜನ ಸಿಬ್ಬಂದಿಗಳನ್ನು 6 ತಿಂಗಳ ಅವಧಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ಸದರಿ ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಲು ರೂ.21.42 ಕೋಟಿಗಳನ್ನು ಪಾವತಿಸಲು ಬಿಬಿಎಂಪಿಯೇ ಕ್ರಮವಹಿಸಬೇಕಾಗಿರುವುದರಿಂದ ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ಪಡೆಯುವಂತೆ ಹಾಗೂ ಆದೇಶ ಹೊರಡಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರು, ನಗರಾಭಿವೃದ್ಧಿ ಇಲಾಖೆಯನ್ನು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 138 ಎಂಎನ್ ಜಿ 2020,**

**ಬೆಂಗಳೂರು. ದಿನಾಂಕ: 08-07-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 10,000 Covid-19 ರೋಗಿಗಳನ್ನು 6 ತಿಂಗಳುಗಳ ಅವಧಿಗೆ ನಿರ್ವಹಣೆ ಮಾಡಲು, ಕೆಳಕಂಡ ತಖ್ತೆಯಲ್ಲಿ ತಿಳಿಸಿರುವ ಸಂಖ್ಯೆಯ ವೈದ್ಯರು, ನರ್ಸ್‌ಗಳು, ಸಹಾಯಕರು ಮೊದಲಾದ ಪೂರಕ ಸಿಬ್ಬಂದಿಗಳನ್ನೊಳಗೊಂಡ ಮಾನವ ಸಂಪನ್ಮೂಲವನ್ನು 6 ತಿಂಗಳಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಮತ್ತು ಸದರಿಯವರಿಗೆ ರೂ.21.42 ಕೋಟಿ ಅನುದಾನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಂತ ನಿಧಿಯಿಂದ ಭರಿಸುವ ಷರತ್ತಿಗೆ ಒಳಪಟ್ಟು ಅನುಮೋದನೆ ನೀಡಿ ಆದೇಶಿಸಿದೆ.

| **Sl. No.** | **HR required for hospitals (Ayush, BDS Medical officers)** | **Per day/ (for 3 shift)** | **For 1 month salary (Rs.) in Lakhs** | **For 6 months salary (Rs.) in Lakhs** | **Re-marks** |
|---|---|---|---|---|---|
| 1. | For every 100 patients 1 doctors per shift | 100x3=300 | 45000x300=135.00 | 810.00 | |
| 2. | For every 50 patients 1 staff nurse per shift | 200x3=600 | 20000x600=120.00 | 720.00 | |
| 3. | For every 100 patients 2 supporting staffs per shift | 100x2=200 | 15000x200=30.00 | 180.00 | |
| 4. | For every 100 patients 3 group D per shift | 200x3=600 | 12000x600=72.00 | 432.00 | BBMP to Provide the Group 'D' |
| | **Total** | **1700** | **357.00** | **2142.00** | |

Scanned with CamScanner

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 228 EXP-9/2020 ದಿನಾಂಕ: 07-07-2020ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಪರತ್ತು: ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಸಾಧಿಲ್ವಾರು ವೆಚ್ಚ ಕೈಪಿಡಿಯನುಸಾರ ದಾಖಲೆಗಳನ್ನು ನಿರ್ವಹಿಸುವ ಮತ್ತು ಪ್ರವಿಧಾನಗಳನ್ನು ಪರಿಪಾಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಕ್ಷ್ಮೀ ಸಾಗರ್ ಎನ್ .ಕೆ)
ಸರ್ಕಾರದಅಧೀನ ಕಾರ್ಯರ್ಶಿ (ಬಿಬಿಎಂಪಿ)
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ.
2. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ,
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
7. ವಿಶೇಷ ಆಯುಕ್ತರು/ ಅಪರ ಆಯುಕ್ತರು (ಆರೋಗ್ಯ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಶಾಖಾ ರಕ್ಷ ಕಡತ.

Scanned with CamScanner